ಸಿ.ಸಿ. ನಂಬರ್‌ಃ **466/2015**
ಸಿ.ಡಬ್ಲ್ಯು: **18** ಪಿ.ಡಬ್ಲ್ಯು: **6**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,

ಧಾರವಾಡ

ಸಿ.ಸಿ. ನಂಬರ್‌ಃ **466/2015**

ದಿಃ **07-08-2025** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

1. ದಿಃ03-02-2015 ರಂದು ವಿದ್ಯಾಗಿರಿ ಪೋಲಿಸ ಠಾಣೆಯ ಅಪರಾಧ ಸಂಖ್ಯೆ 243/2014 ರಲ್ಲಿ ಮೂಲ ಜಪ್ತಿ ಪಂಚನಾಮೆ ನಿಪಿ.5 ರಂತೆ ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವರ್ಗಾಯಿಸಿರುತ್ತೇನೆ. ಚಾಸಾ.11 ರಿಂದ 17 ರವರ ಹೇಳಿಕೆಗಳನ್ನು ಸಹ ವರ್ಗಾಯಿಸಿರುತ್ತೇನೆ. ಸದರಿ ದಾಖಲೆಗಳನ್ನು ಚಾಸಾ.19 ರವರು ಪಡೆದುಕೊಂಡಿರುತ್ತಾರೆ. ಆರೋಪಿತರಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಂಡ ಬಂಗಾರದ ಚೈನ್ ನ್ನು ಸಹ ಉಪನಗರ ಪೋಲಿಸ್ ಠಾಣೆಗೆ ವರ್ಗಾವಣೆ ಮಾಡಿ ಚಾಸಾ.19 ರವರಿಗೆ ಒಪ್ಪಿಸಿರುತ್ತೇನೆ. ಸಾಕ್ಷಿಯು ಸದರಿ ಚೈನ್ ನ್ನು ಈಗಾಗಲೇ ಗುರುತಿಸಿರುವ ನಿಪಿ.2 ಛಾಯಾ ಚಿತ್ರದಲ್ಲಿ ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ಸಾಕ್ಷಿಯು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿತರ ಸ್ವ ಖುಷಿ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.7 ಮತ್ತು 8 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿ.7(ಎ) ,8(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ನಂ.**1** ಪರ ವಕೀಲರವರಿಂದಃ

1. ಅಪರಾಧ ಸಂಖ್ಯೆ 243/2014 ಇದು ಸಿ ಸಿ ನಂ.74/2016 ಎಂದು ನೋಂದಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ.ಆರೋಪಿತರ ಮೇಲೆ ಇದ್ದ ಸಿ ಸಿ ನಂ. 74/2016, 75/2016,76/2016 ಈ ಪ್ರಕರಣಗಳು ನಮ್ಮ ಠಾಣೆಗೆ ಸಂಬಂಧಿಸಿದ್ದವು ಇದ್ದವು ಹಾಗೂ ಅವುಗಳಲ್ಲಿ ಆರೋಪಿತರು ಬಿಡುಗಡೆ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಮುಖ್ಯ ಸಿ ಸಿ ನಂ. 74/2016 ಪ್ರಕರಣ ಸಹ ಬಿಡುಗಡೆ ಆಗಿದೆ ಎಂದರೆ ಗೊತ್ತಿಲ್ಲ. ಸಿ ಸಿ ನಂ.477/2016

ಪ್ರಕರಣ ಸಹ ಆರೋಪಿತರು ಬಿಡುಗಡೆ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ಪ್ರಕರಣಗಳಲ್ಲಿ ನಾನು ದಿಃ16-02-2023 ರಂದು ಹೇಳಿದ ಸಾಕ್ಷ್ಯ ಹೇಳಿದ್ದೆ, ಅದನ್ನು ಪರಿಗಣಿಸಿ ಆರೋಪಿತರು ಬಿಡುಗಡೆ ಆಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಯಾವುದೇ ರೇಡ್ ಮಾಡಿಲ್ಲ, ಯಾವುದೇ ವಸ್ತುಗಳನ್ನು ಆರೋಪಿತರ ಕಡೆಯಿಂದ ಜಪ್ತಿ ಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಠಾಣೆಯಲ್ಲಿದ್ದಾಗ ಬಾಲಾಜಿ ಗೋಲ್ಡ ಶಾಪ್ ಬಳಿ ಅನುಮಾನಸ್ಪದವಾಗಿ ಇಬ್ಬರು ಓಡಾಡುತ್ತಿದ್ದಾರೆ ಎಂದು ಮಾಹಿತಿ ಬಂದಿತು ಎಂದರೆ ಸರಿಯಲ್ಲ. ನಾವು ಮತ್ತು ಸಿಬ್ಬಂದಿಯವರು ಹಾಗೂ ಇಬ್ಬರು ಪಂಚರೊಂದಿಗೆ ಅಲ್ಲಿಗೆ ಹೋಗಿ ನೋಡಲಾಗಿ ಇಬ್ಬರು ವ್ಯಕ್ತಿಗಳು ಅನುಮಾನಸ್ಪದವಾಗಿ ದ್ವಿಚಕ್ರವಾಹನದಲ್ಲಿ ನಿಂತಿರುವುದು ಕಂಡು ಬಂತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳು ಆರೋಪಿತರು ಇದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.1 ರವರ ಕಿಸೆಯಲ್ಲಿ ಬಂಗಾರದ ತುಂಡುಗಳು ಕಂಡು ಬಂದಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಸದರಿ ಬಂಗಾರದ ತುಂಡುಗಳು ರೈಲ್ವೇ ನಿಲ್ದಾಣದ ಹತ್ತಿರ ಒಬ್ಬ ಮಹಿಳೆಯ ಕೊರಳಿನಿಂದ ಸರವನ್ನು ಕಿತ್ತುಕೊಂಡಾಗ ಮೂರು ಬಂಗಾರದ ತುಂಡುಗಳ ಲಾಕೇಟ್ ಸಿಕ್ಕಿತು ಎಂದು ಆರೋಪಿತರು ಹೇಳಿದರು ಎಂದರೆ ಸರಿಯಲ್ಲ. ನಾನು ಯಾವುದೇ ರೇಡ್ ಗೆ ಹೋಗಿರುವುದಿಲ್ಲ, ಆರೋಪಿತರನ್ನು ಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ರೇಡ್ ಮಾಡಿದ್ದೇನೆ ಎಂದು ತೋರಿಸಲು ಈ ಪ್ರಕರಣದಲ್ಲಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

2. ಆರೋಪಿತರು ತಮ್ಮ ಸ್ವ ಇಚ್ಛೆ ಹೇಳಿಕೆಯಲ್ಲಿ ಬಂಗಾರದ ಒಡವೆಗಳನ್ನು ಮಣಿಪುರಂ ಫೈನಾನ್ಸದಲ್ಲಿ ಅಡ ಇಟ್ಟಿದ್ದೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಪಂಚರು ಹಿಂದಿನ ಪ್ರಕರಣದಿಲ್ಲಿಯೂ ಸಹ ಅವರೇ ಪಂಚರು ಇದ್ದರು ಎಂದರೆ ಸರಿಯಲ್ಲ. ನಾಲ್ಕು ಪ್ರಕರಣಕ್ಕೆ ನಾವು ಪ್ರತ್ಯೇಕವಾದ ಜಪ್ತಿ ಪಂಚನಾಮೆ ಮಾಡಿಲ್ಲ. ಮಣಿಪುರಂ ಫೈನಾನ್ಸ ನಮ್ಮ ಠಾಣೆಯ

ಹದ್ದಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಾನು ಯಾವುದೇ ಮಾಂಗಲ್ಯ ಸರ ಮತ್ತು ಚೈನ್ ನ್ನು ಮಣಿಪುರಂ ಫೈನಾನ್ಸ ದಿಂದ ಜಪ್ತಿ ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮಾಂಗಲ್ಯ ಸರ ಮತ್ತು ಚೈನ್ ಕ್ರೈಂ ನಂ. 187/2014 ಕ್ಕೆ ಸಂಬಂಧಿಸಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಮಣಿಪುರಂ ಫೈನಾನ್ಸ ದಲ್ಲಿ ಖಾತೆ ತೆಗೆದಿರುವಂತಹ ದಾಖಲೆ ಹಾಗೂ ಸಾಲ ತೆಗೆದಿರುವ ಬಗ್ಗ ದಾಖಲೆಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿ. ಆರೋಪಿತರಿಗೆ ಸಂಬಂಧಿಸಿದಂತಹ ದಾಖಲೆಗಳನ್ನು ಮಣಿಪುರಂ ಫೈನಾನ್ಸದಿಂದ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಈ ಪ್ರಕರಣದ ತನಿಖಾಧಿಕಾರಿ ಅಲ್ಲ ಎಂದು ಹೇಳುತ್ತಾರೆ. ಸರ್ಚ ಸೀಜರ್ ಲಿಸ್ಟ ಮಾಡಿ ಮಣಿಪುರಂ ಫೈನಾನ್ಸಕ್ಕೆ ಅದನ್ನು ಕೊಟ್ಟಿಲ್ಲ, ಆದರೆ ಪಂಚನಾಮೆ ಮಾಡಿ ಪಂಚನಾಮೆ ಕಾಪಿಯನ್ನು ಕೊಟ್ಟಿರುತ್ತೇನೆ. ನಮ್ಮ ಅಂಗ ಜಡ್ತಿಯನ್ನು ಹಾಗೂ ಪಂಚರ ಜಡ್ತಿಯನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಐಡೆಂಟಿಫಿಕೇಶನ್ ಪರೇಡ್ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಮಂಗಳ ಸೂತ್ರ ಹಾಗೂ ಸರವನ್ನು ಮಣಿಪುರಂ ಫೈನಾನ್ಸ ದಲ್ಲಿ ಅಡವಿಟ್ಟಿರಲಿಲ್ಲ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ನಂ.**1** ಪರ ವಕೀಲರು ಮಾಡಿದ ಪಾಟೀಸವಾಲನ್ನು ಆರೋಪಿ ನಂ.**2** ಪರ ವಕೀಲರು ಅಳವಡಿಸಿಕೊಳ್ಳಲು ಕೇಳಿದ್ದರಿಂದ ಅಳವಡಿಸಿಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.　　　　　　　　　　ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.